OS No. 197/2012 PW-1

<u>ದಿನಾಂಕ **31.07.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್ ಎಂ ವಕೀಲರಿಂದಃ</u>

ಖರೀದಿ ಕರಾರು ಪತ್ರಕ್ಕೆ ನಾನು ಮತ್ತು ನನ್ನ ತಾಯಿ ಸಹಿ ಮಾಡಿಲ್ಲ 8 ಲಕ್ಷ ಹಣವನ್ನು ಸಬ್ ರಿಜಿಸ್ಟರ್ ಕಛೇರಿಯಲ್ಲಿ ಕೊಟ್ಟ ಬಗ್ಗೆ ಖರೀದಿ ಕರಾರು ಪತ್ರದಲ್ಲಿ ತಿಳಿಸಿಲ್ಲ. ದಾವಾ ಆಸ್ತಿಯ ಮೂಲಪತ್ರವಾದ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಬೇರೆ ಯಾವುದೇ ದಾಖಲೆ ಕೊಟ್ಟಿಲ್ಲ. ನನ್ನ ಗಂಡನ ತಂದೆಯ ಹೆಸರು ತಮ್ಮಣ್ಣ. ನನ್ನ ಗಂಡನ ಹೆಸರು ರಮೇಶ್. ನನ್ನ ಗಂಡನ ಊರು ಸಂಕಲಗೆರೆ. ನನ್ನ ಗಂಡನ ಸಹಿ ಬಗ್ಗೆ ಗೊತ್ತಿದೆ. ವಕೀಲರು ಖರೀದಿ ಕರಾರು ಪತ್ರವನ್ನು ತೋರಿಸಿದಾಗ ಸಾಕ್ಷಿಯು ಗಂಡ ಸಹಿ ಇರುವುದನ್ನು ಒಪ್ಪಿಕೊಳ್ಳುತ್ತಾರೆ. ಸದರಿ ಪತ್ರವನ್ನು ಗುರುತಿಸಲು ವಕೀಲರು ತಕರಾರು ತೆಗೆದಿದ್ದು ಪರಿಶೀಲಿಸಿ ತಿರಸ್ಕರಿಸಲಾಯಿತು. ಸದರಿ ಕರಾರು ಪತ್ರವನ್ನು ನಿಡಿ-**1** ಎಂದು ಅದರಲ್ಲಿರುವ ನನ್ನ ಗಂಡನ ಸಹಿಯನ್ನು ನಿಡಿ-**1**(ಎ) ಎಂದು ಗುರುತಿಸಲಾಯಿತು. ನನ್ನ ಗಂಡ ಸದರಿ ಕರಾರು ಪತ್ರವನ್ನು ಮುಂದೆ ನಿಂತು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆಂದರೆ ನೆನಪಿಲ್ಲ

2. ವಕೀಲರು ಖರೀದಿ ಕರಾರು ಪತ್ರವನ್ನು ದಿ28.04.2006 ಅನ್ನು ತೋರಿಸಿದಾಗ ಸಾಕ್ಷಿಯು ತನ್ನ ಗಂಡನ ಸಹಿ ಇರುವುದನ್ನು ತಿರಸ್ಕರಿಸುತ್ತಾರೆ. 2005 ರಿಂದ ನನ್ನ ಗಂಡ ಪ್ರತಿವಾದಿಯವರಿಗೆ ಸ್ನೇಹಿತರಾಗಿದ್ದು, ಅವರಿಗೆ ತುಂಬಾ ಆಸ್ತಿಗಳನ್ನು ಕೊಡಿಸಿಕೊಟ್ಟಿದ್ದಾರೆಂದರೆ ಗೊತ್ತಿಲ್ಲ. ನನ್ನ ತಂದೆ ಬಿಡದಿಯಲ್ಲಿ ಆಸ್ತಿಯನ್ನು ಮಾರಾಟ ಮಾಡಿದ್ದರು ಆದರೆ ದಿನಾಂಕ ಮತ್ತು ಇಸವಿ ಹಾಗೂ ಮೊಬಲಗು ಮತ್ತು ಯಾರಿಗೆ ಮಾರಾಟ ಮಾಡಿದ್ದಾರೆಂದು ನೆನಪಿಲ್ಲ. ನನ್ನ ತಂದೆ ಯಾವುದೇ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದರೆ ಸುಳ್ಳು. ನಾನು ಕ್ರಯ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನಿಪಿ-2 ಅನ್ನು ದಿಃ15.06.2012 ರಲ್ಲಿ ತೆಗೆದುಕೊಂಡಿರುತ್ತೇವೆ

ಎಂದರೆ ದಿಃ10.06.2012 ರಲ್ಲಿ ತೆಗೆದುಕೊಂಡಿರುತ್ತೇವೆಂದು ನುಡಿಯುತ್ತಾರೆ. ನಿಪಿ-1 ಪಹಣಿಯನ್ನು ದಿಃ 25.08.2011 ರಲ್ಲಿ ತೆಗೆದುಕೊಂಡಿರುತ್ತೇವೆ ಎಂದರೆ ನಿಜ. ಈ ದಾಖಲೆಗಳನ್ನು ನಾವೇ ಪಡೆದು ಹಾಜರುಪಡಿಸಿರುತ್ತೇವೆಂದರೆ ಸಾಕ್ಷಿಯು ಪ್ರತಿವಾದಿಯು ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಿಪಿ-6 ರಲ್ಲಿರುವ ವಿಳಾಸದಲ್ಲಿ ಪ್ರತಿವಾದಿ ವಾಸವಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಪ್ರತಿವಾದಿಯವರಿಗೆ ಸುಳ್ಳು ವಿಳಾಸ ತೋರಿಸಿ ನೋಟಿಸ್ ಕಳುಹಿಸಿರುತ್ತೇವೆಂದರೆ ಸುಳ್ಳು. ದಿಃ10.06.2011 ರಲ್ಲಿ ನನ್ನ ತಂದೆಗೆ 8 ಲಕ್ಷ ಹಣ ಕೊಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸುಳ್ಳು. ನನ್ನ ತಂದೆ ಕರಾರು ಪತ್ರದ ಪ್ರಕಾರ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸುಳ್ಳು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ನನ್ನ ಗಂಡ ಪ್ರತಿವಾದಿ ಯನ್ನು ಕರೆದುಕೊಂಡು ಹೋಗಿ ನಾಮಕಾವಸ್ತೆ ಕರಾರು ಪತ್ರವನ್ನು ಬರೆಸಿರುತ್ತಾರೆಂದರೆ ಸುಳ್ಳು ಸಾಲಕ್ಕಾಗಿ ಕರಾರು ಪತ್ರವನ್ನು ಬರೆಸಿರುತ್ತಾರೆಂದರೆ ಸುಳ್ಳು ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.